ಸವಾಲಿನಂತೆ ಕಾಣತೊಡಗಿತ್ತು. ಮುಂದಿನ ಬಾರಿ ಅದೇನು ಥಂಬು ಅಂದ್ರಲ್ಲ ಅದನ್ನು ಸರಿಯಾಗಿ ಮಾಡಿ ಅಂತ ಹೇಳಿದ್ರಾಯ್ತು ಅಂತ ತನಗೇ ತಾನೇ ಸಮಾಧಾನ ಮಾಡಿಕೊಂಡಿದ್ದ.

ಎರಡು ದಿನ ಕಾದು ಮತ್ತೊಮ್ಮೆ ಶೇವ್ ಮಾಡಿಸಿಕೊಂಡು, ಈ ಹಿಂದೆ ಹಾಕಿದ್ದ ಅಂಗಿಯನ್ನೇ ಹಾಕಿಕೊಂಡು, ಕ್ರಾಪು ಬಾಚಿಕೊಂಡು, ವೋಟರು ಕಾರ್ಡ್ ಹಿಡಿದುಕೊಂಡು ಮತ್ತೆ ಸಾಲಿನಲ್ಲಿ ನಿಂತಿದ್ದ. 'ಅಣಾ ಥಂಬು ಅಂದ್ರೇನು...' ಅಂತ ಸಾಲಿನಲ್ಲಿ ನಿಂತವರನ್ನು ಕೇಳಿದ್ದ. 'ಅದೇ ಮಿಷನ್ ಮೇಲೆ ಎಲ್ಲಾ ಬೆರಳು ಇಡ್ತಾರಲ್ಲ ಅದು. ಅದು ಸರಿಯಾಗಿ ಬರ್ಬೇಕು' ಅಂದಿದ್ದರು ಯಾರೊ. ತನ್ನ ಬೆರಳುಗಳನ್ನು ಪದೇ ಪದೇ ನೋಡಿಕೊಂಡಿದ್ದ. ಗೆರೆಗಳು ಕಂಡಿದ್ದವು ಅದರೊಳಗೆ ಸಿಕ್ಕಿ ಹಾಕಿಕೊಂಡ ಬದುಕೂ ಕಂಡಿತ್ತು.

ಹೆಸರನ್ನೂ, ವಿಳಾಸವನ್ನೋ ಬದಲಿಸಲು ನಿಂತುಕೊಂಡವರ ಆಧಾರ್ ಇಸಿದುಕೊಂಡು, ಹಿಂದೆ ಮುಂದೆ ತಿರುಗಿಸಿ ನಾಲ್ಕಾರು ಬಾರಿ ನೋಡಿದ್ದ. ನನ್ನದು ಹೀಗೆ ಬರಬಹುದು, ಇದಕ್ಕೂ ಚೆನ್ನಾಗಿಯೇ ಬರಬಹುದೆಂದು ತನಗೆ ತಾನೇ ಹೇಳಿಕೊಂಡಿದ್ದ. ಇದೇ ತನ್ನದೆ ಏನೊ ಎಂಬಂತೆ ಕಲ್ಪಿಸಿಕೊಳ್ಳಲು ಯತ್ನಿಸಿದ್ದ.

ಈಗ ಮತ್ತೊಮ್ಮೆ ಆಧಾರ್ ಮಾಡುವ ಹುಡುಗನ ಮುಂದೆ ಹಾಜರಾಗಿದ್ದ.

* * *

ಮತ್ತೊಂದು ತಿಂಗಳು ವರ್ಷದಂತೆ ಕಳೆಯಿತು. ಇಂದು ಬರಬಹುದು, ನಾಳೆ ಬರಬಹುದು ಎಂದು ಕಾದಿದ್ದ. ಕವಿಯೊಬ್ಬ ಕವಿತೆಯನ್ನು ಎದುರು ನೋಡುವಂತೆ ನೋಡತೊಡಗಿದ್ದ. ಪೋಸ್ಟ್ ಮ್ಯಾನ್ ದೇವೇಂದ್ರಪ್ಪನನ್ನು ಇನ್ನಿಲ್ಲದಂತೆ ಕಾಡತೊಡಗಿದ್ದ. ಮೊದ-ಮೊದಲು ಸುಮ್ಮನಿರುತ್ತಿದ್ದ ದೇವೇಂದ್ರಪ್ಪ ಇತ್ತೀಚಿಗೆ ಪರಸಪ್ಪನಿಗೆ ಜೋರು ಮಾಡತೊಡಗಿದ್ದ. 'ಕಾರ್ಡ್ ಬಂದರೆ ಇಟ್ಕೊಂಡು ನಾನೇನು ಮಾಡ್ಲಿ ಮಾರಾಯಾ...' ಅಂತಂದು ಸಿಟ್ಟನಿಂದ ನೋಡಿ ಹೋಗುತ್ತಿದ್ದ.

ರೇಷನ್ ಕಾರ್ಡು ಮಾಡಿಸಿ ಒಂದಷ್ಟು ಅಕ್ಕಿ ಗೋಧಿಯಾದರೂ ಮನೆಗೆ ತಂದುಕೊಳ್ಳಬಹುದೆಂದು ಆಸೆ ಇಟ್ಟುಕೊಂಡಿದ್ದ ಗಿರಿಜಿಗೂ ಬೇಸರವಾಗಿತ್ತು. 'ಊರೆಲ್ಲಾ ಕಾರ್ಡು ಮಾಡಿಸಿಕೊಂಡಿದ್ರೆ ನಿಮಗೇನಾಗಿತ್ತು ದಾಡಿ...' ಎಂದು ಮತ್ತೆ ಮತ್ತೆ ದನಿಯೇರಿಸಿ ಬೈಯುತ್ತಿದ್ದಳು. ಮದುವೆಗೂ ಮುಂಚೆಯೇ ಕಾರ್ಡು ಮಾಡಿಸಿಕೊಂಡಿದ್ದ ಆಕೆಯ ಬಳಿ ಈಗಾಗಲೇ ಕಾರ್ಡು ಇತ್ತು. ಇವರದೂ ಆಗಿಬಿಟ್ಟರೆ ಬೇಗ ರೇಷನ್ ಕಾರ್ಡು ಮಾಡಿಸಿಕೊಂಡು ಬಿಡೋಣ ಅಂದುಕೊಂಡಿದ್ದಳು.

ಹೆಂಡತಿಯ ಮಾತುಗಳು ಕೂಡ ಅವನನ್ನು ಕಂಗೆಡಿಸಿದ್ದವು.

ಗಿರಿಜಿ ಒಮ್ಮೆ ಪರಸಪ್ಪನನ್ನು ಕರೆದುಕೊಂಡು ತಾಲ್ಲೂಕು ಕಚೇರಿಗೆ ಹೋಗಿ ತನ್ನ ಆಧಾರ್ ಕಾರ್ಡು ತೋರಿಸಿ ರೇಷನ್ ಕಾರ್ಡು ಮಾಡಿಸಬಹುದಾ ಕೇಳಿದ್ದಳು. 'ನಿಮ್ಮ ಗಂಡನದೂ ಆಧಾರ್ ಕಾರ್ಡ್ ಬರಲಿ... ಒಮ್ಮೆಲೇ ಮಾಡಿಸಿಬಿಡಿ ಇಬ್ಬರದೂ ಸೇರಿಸಿ...' ಎಂದು ಹೇಳಿ ಕಳುಹಿಸಿದ್ದರು. ಸಿಡುಕಿನಿಂದಲೇ ಗಿರಿಜಿ ವಾಪಸ್ ಆಗಿದ್ದಾಳೆ.

ಎರಡು ತಿಂಗಳು ಕಳೆದರೂ ಕಾರ್ಡು ಬರಲಿಲ್ಲ. ಮತ್ತೆ ಚಿಂತಿತನಾದ ಪರಸಪ್ಪ, ತನ್ನೊಳಗಿನ ಹುರುಪನ್ನು ಎಲ್ಲೋ ಕಳೆದುಕೊಂಡವನಂತೆ ಸದಾ ಗಲಿಬಿಲಿಯಲ್ಲಿ ಇರತೊಡಗಿದ.

ಕೆಲವರು 'ಪರಸ ಟ್ರ್ಯಾಕ್ಟ್ರು ತಗೋಬೇಕು ಅಂತಿ ಆಧಾರ್ ಕಾರ್ಡು ಇಲ್ಲ ಅಂದ್ರೆ ನಿನ್ಹೆಸರಿಗೆ ಹೇಗೆ ರಿಜಿಸ್ಟ್ರು ಮಾಡ್ಸಿಕೊಳ್ತಿ...' ಅಂದು ಅವನ ಗಾಯಕ್ಕೆ ಉಪ್ಪು ಸವರುತ್ತಿದ್ದರು.

ಇವನ ಜೋಲು ಮೋರೆ ನೋಡಿ ಅಂಗಡಿ ಸೀನಣ್ಣ ಕೇಳಿಯೇ ಬಿಟ್ಟದ್ದ. ಇದು ಆಧಾರದ್ದು ವಿಷ್ಯ ಅಂತ ತಿಳಿದ ಮೇಲೆ ನಕ್ಕು 'ಹೇ ಅದಕ್ಕೆಲ್ಲಾ ಹಿಂಗ್ ಬೇಜಾರ್ ಆದರೆ ಹೆಂಗೆ ಪರಸ. ಆಧಾರ್ ಏನ್ ಜೀವ ಏನು. ಆಧಾರ್ ಇಲ್ದೊರು ಎಷ್ಟು ಜನ ಬೇಕಲೇ? ದ್ಯಾಸ ತಪ್ಪಬೇಡ ದ್ಯಾಸ...' ಅನ್ನುತ್ತಾ ಏನೋ ಸಮಾಧಾನ ಮಾಡಿದ್ದ. ಆ ಮಾತುಗಳು ಪರಸಪ್ಪನನ್ನು ತಾಕಿರಲಿಲ್ಲ.

ಕಾದು ಕಾದು ಸೋತು ಒಂದಿನ ರಶೀದಿ ಹಿಡಿದು ಮತ್ತೆ ಆಧಾರ್ ಕಾರ್ಡು ಮಾಡುವ ಹುಡುಗನ ಬಳಿ ಹೋಗಿ 'ಇನ್ನೂ ಬಂದಿಲ್ಲವಲ್ರಿ...' ಎಂದು ತನ್ನ ಅಸಹಾಯಕತೆಯನ್ನು ಕೋಪವಾಗಿ ಪರಿವರ್ತಿಸಿಕೊಂಡು ಕೇಳಿದ್ದ. 'ರಿಜೆಕ್ಟ್ ಆಗೀತೆ ರಿಜೆಕ್ಟ್... ಥಂಬೂ ಬಂದಿಲ್ಲ ಸರಿಯಾಗಿ...' ಎಂಬ ಉಡಾಫೆ ಉತ್ತರ ಪಡೆದುಕೊಂಡು ವಾಪಸ್ಸು ಬಂದಿದ್ದ.